ವೈಶಾಲಿ ಬಹಳ ಜಾಗರೂಕತನದಿಂದ ಇರಲು ಶುರು ಮಾಡಿದ್ದಳು. ಮೆಳ್ಳಗಣ್ಣಿದ್ದವರಂತೆ ಆಗಾಗ ಅತ್ತಿತ್ತ ನೋಡಿದರೂ, ನೋಡಲಾರದ ಗತ್ತು.

ಆಗೀಗ ನೆರೆದ ಜನ ಮತ್ತು ಬಸ್ಸಿನಿಂದ ಇಳಿದವರೆಲ್ಲಾ ಮರದ ನೆರಳಿನ ವ್ಯಾಪ್ತಿಗೆ ಒಳಪಟ್ಟಾಗ, ಬಂದು ಹೋಗುವ ಬಸ್ಸುಗಳ ಮೇಲೆ ನೆರಳು ಭಾರೀ ಮಟ್ಟಸವಾಗಿ ಹರಡಿಕೊಂಡಾಗೆಲ್ಲಾ ತಿಮ್ಮಣ್ಣನ ಮುಖದಲಿ ಮುಗುಳ್ನಗೆ ಗೊತ್ತಾಗದಂತೆ ಮೂಡುತ್ತಿತ್ತು. ಅಂಥಾ ಟೈಮಲ್ಲೂ ನಿಮಿಷಗಳ ಅಂತರದಲ್ಲೇ ವಿಚಿತ್ರ ಆಲೋಚನಾ ಲಹರಿಗಳು ತಿಮ್ಮಣ್ಣನ ತಲೆಯಿಂದ ಹೊರಬೀಳುತ್ತಿದ್ದವು. -'ಮರ ನೆಳ್ಳ ನೀಡ್ಯದ. ಮುಂದೇನೂ ಹಿಂಗ ಇರ್ತದ. ನಾನು? ಮನುಷ್ಯ. ಹೌದು ಮನುಷ್ಯಾ. ಏನ ಕೊಟ್ಟೇನಿ? ಏನ ಕೊಡಾಕ ಸಾಧ್ಯ ಆಗೇತಿ? ಅಪ್ಪಂಗೂ ಮರದ ಮ್ಯಾಲ ಭಾರೀ ಅಭಿಮಾನಿತ್ತು. ನಂಗ ಬುದ್ಧಿ ಬಂದಾಗಿಂದ ನೋಡೇನಿ. ವಿಚಿತ್ರ ಅನಸೂವಂಥಾ ರೀತಿಯ ಪ್ರೀತಿ ಅಪ್ಪಗ ಮರದ ಮ್ಯಾಲೆ ಬೆಳದಿತ್ತು. ಆತನೂ ಆಲದ ಮರದ ಬಿಳಲುಗಳನ್ನ ಭಾಳ ಧ್ಯಾನಸ್ಥ ಆಗಿ ನೋಡ್ತಿದ್ನಾದ್ರೂ ನನ್ನಷ್ಟ ಇರಾಕ್ಕಿಲ್ಲ.' ಮಾತಾಡಿ ಯೋಚನೆ ಮಾಡಿ, ಯೋಚನೆ ಮಾಡಿ ಮಾತಾಡುವಾಗೆಲ್ಲಾ ಮಾತಿಗೆ ಬಂದಾಗೊಮ್ಮೆ ಆಲದ ಮರ, ತಿಮ್ಮಣ್ಣನ ಮಾತಿನೊಳಗಡೆ ಹೀಗೆ ಅಗದಿ ಸಹಜ ಅನ್ನುವಂತಿರತಿತ್ತು. ತನ್ನಲ್ಲಿ ತಾನೇ ಮಾತಾಡಿಕೊಂಡು ಸುಮ್ಮನಾಗುತ್ತಿದ್ದ. ಓತಪ್ರೇತವಾಗಿ ಹರಿದಾಡುತ್ತಿದ್ದ ಇಂಥಾ ವಿಚಾರಗಳಿಷ್ಟು ತಿಮ್ಮಣ್ಣನಿಗೆ ಹಿತ ಅನ್ನಿಸ್ತಿದ್ದಿರಬೇಕು.

ಆದರೆ ಆ ಆಲದ ಗಿಡದ ಮೇಲಿದ್ದ ಒಣಗಿದ ಟೊಂಗೆಯನ್ನು ನೋಡಿದಾಗೆಲ್ಲ 'ಇದೊಂದ್ಯಾಕ ಹಿಂಗ' ಅಂತ ಗಣಿತ ಪರಿಣಿತರಂತೆ ಬಹಳ ತಲೆ ಕೆಡಿಸಿಕೊಂಡು ಆಲೋಚನೆ ಮಾಡುತ್ತಿದ್ದ. ಒಂದೊಂದು ಸಲ ಇವನೌನ ದಿನಾ ಕಂಡರೂ ಕೆಲವೊಮ್ಮೆ ಯಾಕೆ ಹೀಗನಿಸುತ್ತದೆ ಅಂತಲೂ ಸ್ವಗತ ಪರಾಮರ್ಶೆ ಮಾಡ್ಕೋತಿದ್ದ. ಈ ನಡುವೆ ಯಾವುದಾದರೂ ಬಸ್ಸು ಬಂದು ನಿಂತ ಕೂಡಲೇ ಎಲ್ಲವೂ ಮರೆತು ದೃಷ್ಟಿಯನ್ನು ಆ ಕಡೆಯೇ ಹರಿಸುತ್ತಿದ್ದ. ಹೀಗೆ ಯಾವ ವಿಶೇಷವೂ ಇಲ್ಲದ ತಿಮ್ಮಣ್ಣನ ಮರುಕಳಿಕೆ ದಿನಗಳೊಳಗೆ ಅವತ್ತೊಂದಿನ ಕೇಸರಿ ಜಾಕೀಟು ಹಾಕ್ಕೊಂಡವರು ಮರದ ಸುತ್ತ ಅಳತೆ ಮಾಡಿ, ಮರದ ನಡುವಿಗೆ ಮಂದನೆಯ ಸುಣ್ಣ ತೆಳ್ಳಗೆ ಬಳಿಯುತ್ತಿದ್ದದ್ದು ಕಂಡರೂ ತಿಮ್ಮಣ್ಣ ಅವರತ್ತ ಗಮನ ಕೊಡಲು ಹೋಗಲಿಲ್ಲ.

ಅವತ್ತು ಗುರವಾರವಿರಬೇಕು. ತಿಮ್ಮಣ್ಣನ ಮನೆ ಹೆಸರಾದ 'ಬಿಳಲು' ಅಡ್ರೆಸ್ಸೊಂದು ಪತ್ರ ಬಂದಿತ್ತು. 'ಬುಳ್ಳಪ್ಪನವರ ವಿಮಾಪಾಲಿಸಿ ಹಣ ಕೆಲವೇ ದಿನಗಳಲ್ಲಿ ಕೈಗೆ ತಲುಪಲಿದೆ. ಅದಕ್ಕೂ ಮುನ್ನ ಆಫೀಸಿಗೆ ಬಂದು ಆ ಪಾಲಿಸಿಗೆ ನಾಮಿನಿ ಆದ ತಾವು ಎಲ್ಲ ಫಾರ್ಮಾಲಿಟೀಸ್ ಮುಗಿಸಿ ಹೋಗಬೇಕು' ಎಂದು ಪತ್ರದಲ್ಲಿ ಬರೆಯಲಾಗಿತ್ತು. 'ಸೋಮವಾರವೇ ಬಂದರೆ ಉತ್ತಮ' ಎಂಬ ಸಾಲು ಎರಡನೇ ಪುಟದ ಮೊದಲಿಗೇ ಇತ್ತು. ಪತ್ರ ತಿಮ್ಮಣ್ಣನೊಳಗೆ ಅಂಥಾ ಯಾವುದೇ ಬದಲಾವಣೆ ತರಲಿಲ್ಲ. 'ಅಪ್ಪ ಈ ಪಾಲ್ಸಿ ಮಾಡ್ಸಿದ್ದು ಹತ್ತ್ ವರ್ಷದ ಹಿಂದ. ಮುಗ್ಯಾಕ ಇನ್ನ ಎರಡ ವರ್ಷ ಇತ್ತ. ಅಪ್ಪ ಹೋಗಿದ್ದರಿಂದ....' ಯೋಚನೆಗೆ ಜಾರಿದವ ಹಾಗೇ ಪತ್ರಕ್ಕೆ ಸೀಲು ಬಿದ್ದ ತಾರೀಖು ನೋಡಿ, ಕ್ಯಾಲೆಂಡರ್ ಕಡೇನೂ ಒಮ್ಮೆ ಕಣ್ಣಾಡಿಸಿ ಎತ್ತಿಟ್ಟ.

ಸೋಮವಾರ ಒಲ್ಲದ ಮನಸ್ಸಿನಲ್ಲೇ ವಿಮಾ ಕಂಪನಿ ಕಚೇರಿಗೆ ಹೋಗಲು ತಿಮ್ಮಣ್ಣ ಸಜ್ಜಾದ. ಆಲದ ಗಿಡದ ಬುಡದಲ್ಲೇ ನಿಂತು ಬಸ್ ಹತ್ತಿದನಾದರೂ, ಆ ಬಸ್ಸಿನ ಹಿಂದೆಯೇ ಬಂದ ಜೆಸಿಬಿ ಗಾಡಿ ಆತನ ಚಿತ್ತ ಸೆಳೆಯಲಿಲ್ಲ. ಎಲ್ಲ ದಾಖಲೆ ಕೊಟ್ಟು ಕೆಲಸ ಮುಗಿಸಿಕೊಂಡು ಮನೆಗೆ ಬಂದ ತಿಮ್ಮಣ್ಣ ಅವತ್ಯಾಕೋ ಬಹಳ ದಣಿದವರಂತಿದ್ದ. ಆತ ಕೆಲಸ ಮುಗಿಸಿಕೊಂಡು ವಾಪಾಸ್ ಮನೆಗೆ ಬಂದಾಗ ಹೊತ್ತು ಮುಳುಗಿತ್ತು. ಇಡೀ ದಿನ ಕೆಲಸದಲ್ಲಿ ಅಡ್ಡಾಡಿದ್ದರಿಂದ ಸುಸ್ತಾಗಿತ್ತು. ಮನೆಗೆ ಬಂದವನೇ ಹಾಸಿಗೆಗೆ ದುಬ್ಬ ಚಾಚಿದ್ದರಿಂದ ಊಟದ ಪರಿವೆಯೂ ಬಾರದಂತೆ ನಿದ್ದೆ ಹತ್ತಿತು.

ಮುಂಜಾಲೆ ತುಸು ತಡಮಾಡಿ ಎದ್ದ. ಹೊರಗೆ ಬಂದು ನಿಂತವ ಬರೀ ದಿಟ್ಟಿಸುವುದೊಂದನ್ನಷ್ಟೇ ಮಾಡಿದ್ದ. ಸಲ್ಪ ಸಮಯ ಬಿಟ್ಟು ಸುತ್ತ ಕಣ್ಣಾಡಿಸಿದವನ ಎದೆಯಲ್ಲಿ ಗಾಬರಿ. ಅದೇ ಟೈಮಿಗೆ ದಿನಾ ತುಳಸಿ ಪೂಜೆ ಮಾಡುವಾಗ ಜಾಣತನದಿಂದ ಕದ್ದು ನೋಡ್ತಿದ್ದ ವೈಶಾಲಿಯೂ ಯಾಕೋ ಕಾಣಿಸಲಿಲ್ಲ. ಪೂರ್ತಿ ನವೋದಯ ನಗರ ಯಾವುದೋ ಸ್ಮಶಾನದ ಆಪೋಷನಕ್ಕೆ ಒಳಗಾಗಿದೇಯೇನೋ ಅಂತನ್ನಿಸತೊಡಗಿತ್ತು ಅವನಿಗೆ. ಸೀದಾ ಗಡಬಡಿಸಿ